

‘ಕಡಲಿನ ಹುಟ್ಟು’ ತೋರಿಸುವುದು ಹೇಗೆ? ಇದನ್ನು ನೋಡಲು ಸ್ಪೇನಿನ ಡೆಜೆ ಫ್ಲೆಮೆಂಕೊ ನೃತ್ಯ ತಂಡದ ನರ್ತಕಿಯರು ಹೋದಲ್ಲಿಗೆ ಪ್ರೇಕ್ಷಕರೂ ಹೋದರು. ನರ್ತಕಿಯರು ದೊಡ್ಡ ಅಕ್ವೇರಿಯಂನಲ್ಲಿ ಸೀದಾ ನೀರಿಗೇ ಇಳಿದು ನರ್ತಿಸಿ ಸಾಗರನ ಜನ್ಮವನ್ನು ಜಾಲಾಡಿದರು. ನೃತ್ಯ ಆಕರ್ಷಕವಾಗಿದ್ದರೂ ಡ್ರೆಸ್‌ಕೋಡ್ ಮಾತ್ರ ಕೆಲವು ಪ್ರೇಕ್ಷಕರಿಗೆ ನಿರಾಸೆ ತಂದಿತಂತೆ!

ಯಾರಿಗಾಗಿ ನಿರೀಕ್ಷೆ? ಮಲೇಷ್ಯಾದ 107ರ ಹರೆಯದ ವೂಕ್ 23ನೇ ಬಾರಿ ಮದುವೆಯಾಗಲು ಯುವಕನ ಶೋಧಕ್ಕೆ ಇಳಿದಿದ್ದಾಳೆ. ಈಗಿನ ಪತಿ 37 ವರ್ಷದ ಮೊಹ್ಮದ್ ಮಾದಕದ್ರವ್ಯ ಚಟದಿಂದ ಮುಕ್ತಿ ಪಡೆಯಲು ಚಿಕಿತ್ಸೆ ಪಡೆಯುತ್ತಿದ್ದಾನಂತೆ. ಅಲ್ಲಿಂದ ಬಂದ ಮೇಲೆ ಸಣ್ಣ ವಯಸ್ಸಿನ ಯುವತಿಯನ್ನು ಹುಡುಕಿಕೊಂಡು ಹೊರಡುತ್ತಾನೆ ಎಂಬ ಭಯ ವೂಕ್‌ಗೆ. ಜಾಣೆ ವೂಕ್. ಮಾದಕ ದ್ರವ್ಯದ ಅಮಲಿನಲ್ಲಿ 107 ವರ್ಷ 17 ವರ್ಷದಂತೆ ಕಾಣುತ್ತದೆ ಎಂಬ ಸತ್ಯ ಚೆನ್ನಾಗಿ ಗೊತ್ತು.





ಜಗತ್ತಿನ ಲಂಬೂ ಟರ್ಕಿಯ ಸುಲ್ತಾನ್ ಕೊಸೆನ್ ಎತ್ತರ 8 ಅಡಿ 1 ಇಂಚು. ಜೊತೆಗೆ ಅತ್ಯಂತ ದೊಡ್ಡದಾದ ಅಂಗೈ ಮತ್ತು ಅಂಗಾಲು. ಗಿನ್ನೆಸ್ ದಾಖಲೆ ಗರಿ. ಆದರೂ ಕೊಸೆನ್‌ಗೆ ಕಸಿವಿಸಿ. ಕಾರಿನಲ್ಲಿ ಕೂಡ್ರೋಕಾಗಲ್ಲ ಎನ್ನುವುದರ ಜೊತೆಗೆ ಮದುವೆಯಾಗಲು ಹುಡುಗಿ ಸಿಗಲ್ಲ ಎಂದು ಚಿಂತೆ. ಸದ್ಯಕ್ಕೆ ಹುಡುಗಿಯ ತಲಾಷ್‌ನಲ್ಲಿರುವ ಕೊಸೆನ್ ಮದುವೆಯಾದರೆ ಊರುಗೋಲು ಬಿಸಾಕುತ್ತಾನಂತೆ.

ತಪ್ಪುತಪ್ಪಾಗಿ ಇಂಗ್ಲಿಷ್ ಹೊಡೆಯುವವರಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಬುಷ್ ಸಾಹೇಬರಿಗೆ ಮೊದಲ ಸ್ಥಾನವಂತೆ. ಎರಡನೇ ಸ್ಥಾನ ಕ್ಯಾಲಿಫೋರ್ನಿಯ ಗವರ್ನರ್, ಹಾಲಿವುಡ್ ನಟ ಆರ್ನಾಲ್ಡ್‌ಗೆ. ಆತ ಉದುರಿಸಿದ್ದ ವಾಕ್ಯವೇನು ಗೊತ್ತಾ? ‘ಸಲಿಂಗಿ ಮದುವೆ ಹುಡುಗ ಮತ್ತು ಹುಡುಗಿಯ ಮಧ್ಯೆ ನಡೆಯಬೇಕು’.

ಜರ್ಮನಿಯಲ್ಲೀಗ ಕುಂಬಳಕಾಯಿ ಕೊಯ್ಲು. ರಾಶಿ ರಾಶಿ ಕುಂಬಳಕಾಯಿ ಹೊಲದ ತುಂಬ. ರೈತರು ತಮ್ಮ ಹೊಲದ ಕುಂಬಳಕಾಯಿ ಚೆನ್ನಾಗಿದೆ ಎಂದು ಪ್ರಚಾರ ಮಾಡಲು ಕುಂಬಳಕಾಯಿಗಳಿಂದ ಈ ರೀತಿಯ ಕಲಾಕೃತಿಗಳನ್ನು ಮಾಡುತ್ತಾರಂತೆ. ಅಷ್ಟಕ್ಕೂ ಹೊಲದ ಬಳಿ ಕಲಾಕೃತಿ ನಿಲ್ಲಿಸಿದರೆ ಯಾರು ನೋಡುತ್ತಾರೆ ಎಂದಿರಾ? ಅಲ್ಲಿಯ ರೈತರದ್ದು ಏನಿದ್ದರೂ ನೇರ ಮಾರಾಟ. ಮಧ್ಯವರ್ತಿಗಳ ಕಾಟವಿಲ್ಲ, ಬೆಲೆ ಕುಸಿಯಿತೆಂದು ಕುಂಬಳಕಾಯಿ ಚಟ್ನಿಯನ್ನು ರಸ್ತೆಗೆ ಒರೆಸುವ ತಾಪತ್ರಯವಿಲ್ಲ.



ಜರ್ಮನಿ ಕಲಾವಿದ ಒಟ್ಮಾರ್ ತಲೆಯೋತಲೆ. ಬರೋಬ್ಬರಿ ಒಂದು ಸಾವಿರ ಮೀರ್‌ಕ್ಯಾಟ್‌ಗಳನ್ನು ಪ್ಲಾಸ್ಟಿಕ್‌ನಲ್ಲಿ ತಯಾರಿಸಿ ಉದ್ಯಾನದಲ್ಲಿ ಸಾಲಾಗಿ ನಿಲ್ಲಿಸಿದ. ಜನ ಮುಗಿಬಿದ್ದು ನೋಡಿದರು. ತಲೆದೂಗಿದರು. ಒಂದು ಸಾವಿರ ಮೀರ್‌ಕ್ಯಾಟ್ ಎಣಿಸುವ ಕೆಲಸ ಕೊಟ್ಟಿದ್ದಕ್ಕೆ..

ಬ್ರಿಟನ್ನಿನ ಪುರುಷರ ದೃಷ್ಟಿ ಈಗ ಹುಬ್ಬಿನ ಮೇಲೆ ಹೋಗಿದೆಯಂತೆ. ಹೆಂಗಳೆಯರ ಅಲಂಕಾರ ಕಂಡರೆ ಮೇಲೇರುವ ಹುಬ್ಬು ಈಗ ಟ್ರಿಮ್ ಆಗುತ್ತಿದೆ. ಪೊದೆ ಹುಬ್ಬು ಕಾಮನಬಿಲ್ಲಿನ ಆಕಾರ ತಾಳುತ್ತಿದೆ. ಉದ್ಯೋಗಕ್ಕಾಗಿ ಸಂದರ್ಶನಕ್ಕೆ ಹಾಜರಾಗುವ ಯುವಕ ಪುಸ್ತಕದ ಮೇಲೆ ಕಣ್ಣೋಡಿಸುವ ಬದಲು ಹುಬ್ಬಿನ ಮೇಲೆ ಪ್ಲಕ್ಕರ್ ಆಡಿಸುತ್ತಿದ್ದಾನಂತೆ!



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65